**ಸಾಕ್ಷಿಯನ್ನು ದಿಃ *16/12/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಆರಆರಡಿ ವಕೀಲರಿಂದ ಪ್ರತಿವಾದಿ ನಂ.2 ಪರವಾಗಿ.***

ನನ್ನ ಮುತ್ತಜ್ಜನ ಹೆಸರು ಚೆನ್ನಬಸಪ್ಪ ಉಳವಪ್ಪ ಉಳಾಗಡ್ಡಿ ಎಂದರೆ ನಿಜ. ಸದರಿಯವರಿಗೆ ಇಬ್ಬರೂ ಮಕ್ಕಳು ಇದ್ದು, ಅವರುಗಳು ಭೀಮಪ್ಪ ಮತ್ತು ಬಸಲಿಂಗಪ್ಪ. ಭೀಮಪ್ಪನಿಗೆ ಐದು ಜನ ಮಕ್ಕಳಿದ್ದು, ಅವರುಗಳು ಬಸವರಾಜ, ಚೆನ್ನಪ್ಪ, ನಾಗಪ್ಪ, ಮಹಾದೇವಪ್ಪ ಮತ್ತು ಮಲ್ಲಪ್ಪ ಇರುತ್ತಾರೆ. ನಾನು ಬಸವರಾಜ ಇವರ ಮಗಳು ಎಂದರೆ ನಿಜ.

ದಾವಾದಾಸ್ತಿಗಳು ನಮ್ಮ ಮನೆತನದ ಆಸ್ತಿಗಳು ಎಂದರೆ ನಿಜ. ಭೀಮಪ್ಪನಿಗೆ ಬಂದ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ನನ್ನ ನಾಲ್ಕು ಚಿಕ್ಕಪ್ಪಂದಿರ ನಡುವೆ 2013 ಮತ್ತು 2019 ರಲ್ಲಿ ವಾಟ್ನಿಯಾಗಿವೆ ಎಂದರೆ ನಿಜ. ಈ ವಾಟ್ನಿಗಳ ಪ್ರಕಾರ ಬಂದಿರುವ ಆಸ್ತಿಗಳಲ್ಲಿ ಅವರವರ ಸ್ವಾಧೀನತೆ ಹೊಂದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ನಿಜ. ಅದರಂತೆ ನನ್ನ ತಂದೆ ಬಸವರಾಜ ಇವರಿಗೆ ಬಂದ ಆಸ್ತಿಗಳಲ್ಲಿ ಅವರ ಮಕ್ಕಳ ನಡುವೆ ಇಲ್ಲಿಯವರೆಗೂ ಪಾಲು ಆಗಿಲ್ಲ ಎಂದರೆ ನಿಜ. 2 ನೇ ಪ್ರತಿವಾದಿ ಮಿನಾಕ್ಷಿ ನನ್ನ ತಾಯಿ ಎಂದರೆ ನಿಜ. ಬಸವರಾಜ ಇವರ ಕುಟುಂಬದಲ್ಲಿ ನಾನು, ನನ್ನ ಅಕ್ಕ ಲಲಿತಾ ಮತ್ತು ನನ್ನ ತಾಯಿ ಮಿನಾಕ್ಷಿಯನ್ನು ಹೊರತುಪಡಿಸಿ ಬೇರೆ ಸದಸ್ಯರು ಇರುವುದಿಲ್ಲ ಎಂದರೆ ನಿಜ. ಈ ರೀತಿ ಇರುವಾಗ ನಮ್ಮೆಲ್ಲರಿಗೂ ಅಂದರೆ ಪ್ರತಿವಾದಿ ನಂ.2 ಇವರನ್ನು ಸೇರಿಸಿ ಸದರಿ ಬಸವರಾಜ ಇವರ ಆಸ್ತಿಯಲ್ಲಿ ಸಮಪಾಲು ಇರುತ್ತದೆ ಎಂದರೆ ನಿಜ.

***ಪಾಟೀ ಸವಾಲು ಃ ಪ್ರತಿವಾದಿ ನಂ.1 ಇವರು ಯಾವುದೇ ರೀತಿ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಗೈರ ಹಾಜರಾತಿಯಲ್ಲಿ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

***ಪಾಟೀ ಸವಾಲು ಃ ಪ್ರತಿವಾದಿ ನಂ.3 ರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇದ್ದರೂ ಸಹ ನ್ಯಾಯತಾ ದೃಷ್ಟಿಯಿಂದ ಅಂತಿಮವಾಗಿ ಕಾಲಾವಕಾಶ ನೀಡಿ ಅವರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.